## ವ್ಯಕ್ತಿ ಪರಿಚಯ

## ಶ್ರೀ ಬಿ.ವೈ. ರಾಘವೇಂದ್ರ. ಮಾನ್ಯ ಲೋಕಸಭಾ ಸದಸ್ಯರು ಶಿವಮೊಗ್ಗ ಕ್ಷೇತ್ರ

- ಚಲನಶೀಲ ಯುವ ಶಕ್ತಿ ಚಿಂತನ ಶೀಲ, ಬುದ್ದಿ ಶಕ್ತಿ ಮತ್ತು ಕಾರ್ಯಶೀಲ, ಚೈತನ್ಯ ಶಕ್ತಿಯ ತ್ರಿವೇಣಿ ಸಂಗಮ ಶ್ರೀ ಬೂಕನಕೆರೆ ಯಡಿಯೂರಪ್ಪ ರಾಘವೇಂದ್ರರವರು ಸದ್ಗುಣ ಸಚ್ಚಾರಿತ್ರ್ಯ ಸೌಜನ್ಯಪೂರ್ಣ ಗುಣಾಂತರದಿಂದಲೂ, ಸೌಹಾರ್ದ ಸಹನಶೀಲತೆ ಮತ್ತು ಸದ್ಭಾವನೆಗಳಿಂದಲೂ ಕೂಡಿದ ಕೃಷಿ ಕಾಯಕ ಪ್ರಧಾನ ಕೌಟುಂಬಿಕ ಹಿನ್ನೆಲೆಯಿಂದಲೂ ಗುರು ದೈವ ಭಕ್ತಿ ಪೂರ್ವಕ ಭಾವಗಳಿಂದಲೂ ಮತ್ತು ಸೇವಾ ಸಮರ್ಪಣಾ ಸದಾಶಯಗಳು ಸಂಗಮ ಸ್ವಭಾವಗಳ ಹಿನ್ನೆಲೆ ಪರಿಸರ ಪ್ರಭಾವ ಪ್ರಭಾವಳಿಗೆ ಅಂತಸ್ಸತ್ವದ ಆಳದಿಂದ ಕಮಲದಂತೆ ಅರಳಿದವರು ಶ್ರೀ ಬಿ.ವೈ.ರಾಘವೇಂದ್ರರವರು.
- ಶ್ರೀಯುತರು ಮಲೆನಾಡಿನ ಮೈಸಿರಿಯ ಶಿವಮೊಗ್ಗ ಜಿಲ್ಲೆಯ ಕುಮದ್ವತಿ ನದಿ ತಟದ ಶಿಕಾರಿಪುರದಲ್ಲಿ ಶ್ರೀಮತಿ ಮೈತ್ರಾದೇವಿ ಮತ್ತು ಶ್ರೀ ಬಿ.ಎಸ್.ಯಡಿಯೂರಪ್ಪನವರ ಸುಪುತ್ರರಾಗಿ 16ನೇ ಆಗಸ್ಟ್ 1973ರಲ್ಲಿ ಜನಿಸಿದವರು.
- ಕೇಸರಿಯ ಕುಡಿಯೊಡೆಯುವುದು ಕೇಸರಿಯಿಂದಲೇ ಎಂಬ ತ್ರಿಕಾಲ ಸತ್ಯದಂತೆ ಸನ್ಮಾನ್ಯ ನಾಯಕರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರ ಸುಪುತ್ರರಾಗಿ ಜನಿಸಿ, ಬೆಳೆಯುವ ಸಿರಿ ಮೊಳಕೆಯಲ್ಲಿ ನೋಡು ಎಂಬ ನಾಣ್ಣುಡಿಯ ಸಾಕ್ಷಾತ್ಕಾರ ಶ್ರೀ ರಾಘವೇಂದ್ರರವರು, ಕೃಷಿಯನ್ನು ಅತಿಯಾಗಿ ಅವಲಂಬಿಸುವ ಸ್ನೇಹಿತರ ಸಂಕಷ್ಟ-ಸಮಸ್ಯೆಗಳಿಗೆ ಸ್ಪಂದಿಸುವ ನಾಯಕತ್ವದಲ್ಲಿ ತಮ್ಮ ಪಿತಾಶ್ರೀಯವರನ್ನು ಹಿಂಬಾಲಿಸುವ, ಜನಪರ ಸಮಾಜಮುಖಿ ವಿಚಾರಗಳನ್ನು ಬೆಂಬಲಿಸುವ, ಹೊಸ ವಿಚಾರಗಳಿಗೆ ಹಂಬಲಿಸುವ ಸೇವಾಗುಣ ಮತ್ತು ಹೃತ್ಪೂರ್ವಕ ಸೇವೆಯ ಸದ್ಗುಣಗಳ ಕಾರಣದಿಂದಲೇ, ಶಿಕಾರಿಪುರ ಪುರಸಭೆಗೆ ಅಭೂತಪೂರ್ವ ಬೆಂಬಲದೊಂದಿಗೆ ಚುನಾಯಿತರಾಗಿ ಸಂಘಟನೆ, ಸುಧಾರಣೆ ಮತ್ತು ಸತ್ಕಾರ್ಯಗಳ ಸಾಧನೆಯಲ್ಲಿ ಮುನ್ನುಡಿಯಿಡುತ್ತಿರುವುದು ಸಹಜವೇ ಸರಿ.
- ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಶಿಕಾರಿಪುರ ಮತ್ತು ಬೆಂಗಳೂರಿನ ಚನ್ನೇನಹಳ್ಳಿ ಶಾಲೆಯಲ್ಲಿ ಹಾಗೂ ಪದವಿಪೂರ್ವ ಶಿಕ್ಷಣವನ್ನು ಶಿವಮೊಗ್ಗ ಡಿ.ವಿ.ಎಸ್. ಕಾಲೇಜಿನಲ್ಲಿ

ಹಾಗೂ ಬಿ.ಬಿ.ಎಂ. ಶಿಕ್ಷಣವನ್ನು ಶಿವಮೊಗ್ಗ ಆಚಾರ್ಯ ತುಳಸಿ ರಾಷ್ಟ್ರೀಯ ಶಿಕ್ಷಣ ಸಂಸ್ಥೆ ಕಾಲೇಜಿನಲ್ಲಿ ಅಭ್ಯಾಸ.

- ವಿದ್ಯಾರ್ಥಿ ದಿಸೆಯಲ್ಲಿ ವಿದ್ಯಾರ್ಥಿ ಸಂಘದ ನಾಯಕನಾಗಿ ಕೆಲಸ.
- 1993 ರಲ್ಲಿ ಕುವೆಂಪು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ ಆಗಿ ಆಯ್ಕೆ.
- 1997 ರಲ್ಲಿ ಗದಗ ಜಿಲ್ಲೆಯವರಾದ ಶ್ರೀಮತಿ ತೇಜಸ್ವಿನಿ ಇವರೊಂದಿಗೆ ವಿವಾಹ, ಸುಭಾಷ್ ಹಾಗೂ ಭಗತ್ ಎಂಬ ಇಬ್ಬರು ಮಕ್ಕಳು.
- 1999 ರಿಂದ ಶ್ರೀಮತಿ ಗಂಗಮ್ಮ ವೀರಭದ್ರಶಾಸ್ತ್ರಿ ಸ್ಮಾರಕ ಟ್ರಸ್ಟ್ (ರಿ) ಹಾಗೂ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ಶಿಕಾರಿಪುರ ಈ ಸಂಸ್ಥೆಗಳ ಮ್ಯಾನೇಜಿಂಗ್ ಟ್ರಸ್ಟಿ ಹಾಗೂ ಕಾರ್ಯದರ್ಶಿಗಳಾಗಿ ಪ್ರಾಥಮಿಕ ಶಿಕ್ಷಣ/ ಪ್ರೌಢಶಿಕ್ಷಣ/ಪದವಿಪೂರ್ವ ಶಿಕ್ಷಣ/ಡಿಎಡ್ ಕಾಲೇಜು/ಬಿಎಡ್ ಕಾಲೇಜು/ ನರ್ಸಿಂಗ್ ಕಾಲೇಜುಗಳನ್ನು ನಡೆಸುವುದರ ಮುಖಾಂತರ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಾ ಯಶಸ್ವಿಯಾಗಿ ನಡೆಸುತ್ತಿದ್ದಾರೆ.
- 2007ರಲ್ಲಿ ಪ್ರಥಮ ಬಾರಿಗೆ ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಿ ಶಿಕಾರಿಪುರ ದೊಡ್ಡಪೇಟೆಯ ಪುರಸಭಾ ಸದಸ್ಯರಾಗಿ ಆಯ್ಕೆ.
- 2008 ರಲ್ಲಿ ಶಿವಮೊಗ್ಗದಲ್ಲಿ ರಾಜ್ಯದ ಪ್ರತಿಷ್ಟಿತ ಶಿಕ್ಷಣ ಸಂಸ್ಥೆಯಾದ ಪ್ರೇರಣಾ ಎಜುಕೇಷನಲ್ ಅಂಡ್ ಸೋಷಿಯಲ್ ಟ್ರಸ್ಟ್ ಮೂಲಕ ಪಿಇಎಸ್ ಇಂಜಿನಿಯರಿಂಗ್ ಕಾಲೇಜನ್ನು ಪ್ರಾರಂಭಿಸಿ ತನ್ಮೂಲಕ ಪಿಯು ಕಾಲೇಜು, ಬಿಬಿಎಂ ಹಾಗೂ ಎಂಬಿಎ ಕಾಲೇಜುಗಳ ಮ್ಯಾನೆಜಿಂಗ್ ಟ್ರಸ್ಟಿ ಆಗಿ ಕಾರ್ಯ ನಿರ್ವಹಣೆ.
- 2008 ರಲ್ಲಿ ಶಿಕಾರಿಪುರ ಪಟ್ಟಣದಲ್ಲಿ ಪ್ರತಿಷ್ಟಿತ ಸಿಬಿಎಸ್ಇ ಶಿಕ್ಷಣ ಸಂಸ್ಥೆಯನ್ನು ಪ್ರಾರಂಭಿಸಿ ಪ್ರಾಥಮಿಕ/ಪ್ರೌಢ ಶಿಕ್ಷಣವನ್ನು ನೀಡಲಾಗುತ್ತಿದೆ.
- 2009 ರಲ್ಲಿ ಶಿವಮೊಗ್ಗ ನಗರದಲ್ಲಿ ನಡೆದ ರಾಜ್ಯ ಮಟ್ಟದ ಸಮಾವೇಶಗಳಾದ ಸಹಕಾರಿ ಸಮಾವೇಶ ಹಾಗೂ ವಿವಿಧ ಸಮಾಜಗಳ ಸಮಾವೇಶಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಿಕೆ.
- 2009 ರ ಮೇ ತಿಂಗಳಲ್ಲಿ ನಡೆದ 15ನೇ ಲೋಕಸಭಾ ಚುನಾವಣೆಯಲ್ಲಿ ರಾಷ್ಟ್ರ ರಾಜಕೀಯಕ್ಕೆ ಪ್ರವೇಶ ಮಾಡಿ, ಶಿವಮೊಗ್ಗ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಬಹುಮತದಿಂದ ಆಯ್ಕೆ.

- ಪ್ರಸ್ತುತ ಲೋಕಸಭೆಯಲ್ಲಿ ಲೋಕಸಭಾ ಕೈಗಾರಿಕಾ ಸ್ಥಾಯಿ ಸಮಿತಿಯ ಸದಸ್ಯರಾಗಿ ಕಾರ್ಯನಿರ್ವಹಣೆ.

# ಸಾಧನೆ

- 2009ರ ಪಾರ್ಲಿಮೆಂಟ ಅಧಿವೇಶನದಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ರೈಲ್ವೆ ಬಜೆಟನಲ್ಲಿ ಶಿವಮೊಗ್ಗ-ಬೆಂಗಳೂರು ಇಂಟರಸಿಟಿ ರೈಲನ್ನು ಪ್ರಾರಂಭಿಸಲು ಹಾಗೂ ಶಿವಮೊಗ್ಗ-ಹರಿಹರ ರೈಲ್ವೆಯ ಸರ್ವೆ ಯೋಜನೆಗೆ ಅನುಮತಿ ದೊರೆಕಿಸಿರುವುದು.
- ಶಿವಮೊಗ್ಗ-ತಾಳಗುಪ್ಪ ಬ್ರಾಡ್‌ಗೇಜ್ ಯೋಜನೆಯ ಕಾಮಗಾರಿಯನ್ನು ತ್ವರಿತಗೊಳಿಸಲು ಹಾಗೂ ಅವಶ್ಯವಿರುವ ಅನುದಾನ ಬಿಡುಗಡೆಗೆ ಕ್ರಮ ವಹಿಸಿ, ತಾಳಗುಪ್ಪವರೆಗೆ ರೈಲು ಸಂಚಾರವಾಗುವಂತೆ ಮಾಡಿದವರು.
- ಇದರಿಂದಾಗಿ ಬೆಂಗಳೂರಿನಿಂದ ಹಾಗೂ ಮೈಸೂರಿನಿಂದ ತಾಳಗುಪ್ಪವರೆಗೆ ನೇರ ರೈಲು ಸಂಚಾರಕ್ಕೆ ಸಾಧ್ಯವಾಯಿತು.
- ಶಿವಮೊಗ್ಗ ಜಿಲ್ಲೆಯಲ್ಲಿ ಎಫ್.ಎಂ. ಕೇಂದ್ರವನ್ನು ಪ್ರಾರಂಭಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಿದ್ದರ ಪರಿಣಾಮ, ಶಿವಮೊಗ್ಗ ಜಿಲ್ಲೆಗೆ 3 ಎಫ್.ಎಂ. ಕೇಂದ್ರಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸಲು ಮಂಜೂರಾತಿ ಸಿಕ್ಕುವಂತೆ ಮಾಡಿರುವುದು.
- ಜಿಲ್ಲೆಯಲ್ಲಿ ಹಾದು ಹೋಗುವ ಪ್ರಮುಖ ರಾಷ್ಟ್ರೀಯ ಹೆದ್ದಾರಿಗಳನ್ನು ಅಭಿವೃದ್ದಿಪಡಿಸಲು ಅಗತ್ಯ ಕ್ರಮ.
- ಶಿವಮೊಗ್ಗ ಜಿಲ್ಲೆಯನ್ನು ಮಾದರಿ ಜಿಲ್ಲೆಯನ್ನಾಗಿಸುವ ಉದ್ದೇಶದಿಂದ ರಾಜ್ಯ ಸರ್ಕಾರದ ವಿವಿಧ ಯೋಜನೆಗಳು ಹಾಗೂ ಅಭಿವೃದ್ದಿ ಕಾಮಗಾರಿಗಳ ಮಂಜೂರಾತಿಗೆ ವಿಶೇಷ ಪ್ರಯತ್ನ.
- ತಮಗೆ ಲಭ್ಯವಾಗುವ ಸಂಸತ್ ಸದಸ್ಯರ ಪ್ರದೇಶಾಭಿವೃದ್ಧಿ ಯೋಜನೆಯಡಿ ಸಾರ್ವಜನಿಕರಿಗೆ ಉಪಯುಕ್ತವಾಗುವಂತಹ ಸಾರ್ವಜನಿಕ ಸಮುದಾಯ ಭವನಗಳು, ಬಸ್ ಶೆಲ್ಟರ್‌ಗಳು, ಹೈಮಾಸ್ಟ್ ದೀಪಗಳು, ಶಾಲಾ ಕೊಠಡಿಗಳು, ಆರೋಗ್ಯ ವಿಭಾಗಕ್ಕೆ ಸಂಬಂಧಿಸಿದ ಯೋಜನೆಗಳಿಗೆ, ಹೀಗೆ ಹತ್ತು ಹಲವು ಉಪಯುಕ್ತ ಕಾರ್ಯಕ್ರಮಗಳಿಗೆ ಹಣ ಒದಗಿಸಿರುವುದು.
- ಶಿವಮೊಗ್ಗ ಜಿಲ್ಲೆಯ ಹಲವು ಧಾರ್ಮಿಕ ಮಂದಿರಗಳಿಗೆ, ಮಠಗಳಿಗೆ, ದೇವಸ್ಥಾನಗಳಿಗೆ ಧಾರ್ಮಿಕ ದತ್ತಿ ಇಲಾಖೆಯ ಮೂಲಕ ಅನುದಾನ ದೊರಕಿಸಿಕೊಟ್ಟಿರುವುದು.